**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.22/2026**

**ಪಿರ್ಯಾದಿ** : ಕರ್ನಾಟಕ ಸರ್ಕಾರ
ಪೊನ್ನಂಪೇಟೆ ಪೋಲೀಸ್.

**ವಿರುದ್ಧ**

**ಆರೋಪಿ:** ಶ್ರೀ ಪಣಿಎರವರ ಎಮ್.ಮಹೇಶ್,
ತಂದೆಃ ಮುತ್ತ,
ಪ್ರಾಯಃ 25 ವರ್ಷ,
ವಾಸಃ ಪುಳ್ಳಂಗಡ ಸತೀಶ್ ಲೈನ್ ಹೌಸ್,
ಮಾಯಮುಡಿ ಬೆಮ್ಮತ್ತಿ, ಗೋಣಿಕೊಪ್ಪ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ದೋಷಾರೋಪಣೆ**

*ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:*

ದಿನಾಂಕ 02.03.2025 ರಂದು ಸಮಯ ರಾತ್ರಿ 7.30 ಗಂಟೆಗೆ ಪೊನ್ನಂಪೇಟೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಬೈರಮುಂಡೆ ಬಾಳೆಲೆ ಗ್ರಾಮದ ಕರ್ತಮಾಡ ಪೂಣಚ್ಚರವರ ಲೈನು ಮನೆಯ ಮುಂದಿನ ಅಂಗಳದಲ್ಲಿ ಸಾಕ್ಷಿ 2 ಪಣಿಎರವರ ಬೋಳಾ ರವರು ಮದ್ಯ ಸೇವನೆಯ ಮತ್ತಿನಲ್ಲಿ ಸಾಕ್ಷಿ 3 ಪಣಿಎರವರ ಮುತ್ತರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿರುವಾಗ, ಆರೋಪಿಯಾದ ನೀವು ಸಾಕ್ಷಿ 2 ರವರಿಗೆ ವಿನಾಕರಣ ಏಕೆ ನನ್ನ ತಂದೆಗೆ ಬೈಯುತ್ತೀಯಾ ಎಂದು ಹೇಳಿದಾಗ ಸಾಕ್ಷಿ 2 ರವರು ಆರೋಪಿಯನ್ನು ಹೊಡೆಯುವ ಸಲುವಾಗಿ ಅಲ್ಲೇ ಬಿದ್ದಿದ್ದ ಬಿದರು ದೊಣ್ಣೆಯನ್ನು ತೆಗೆದುಕೊಂಡು ಬಂದಾಗ ಆರೋಪಿಯಾದ ನೀವು ಅದೇ ಬಿದಿರು ದೊಣ್ಣೆಯನ್ನು ಕಿತ್ತುಕೊಂಡು ಸಾಕ್ಷಿ 2 ರವರ ತಲೆಗೆ ಮತ್ತು ಮುಖಕ್ಕೆ ಹಾಗೂ ಶರೀರದ ಭಾಗಳಿಗಗೆ ಹೊಡೆದು ರಕ್ತಗಾಯ ಪಡಿಸಿ ತೀರ್ವ ಸ್ವರೂಪದ ಗಾಯಗಳನ್ನು ಉಂಟು ಮಾಡಿರುವ ಕಾರಣ ಭಾರತೀಯ ನ್ಯಾಯ ಸಂಹಿತೆ ಕಲಂ 118(2) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲ್ಕಂಡ ವಿಚಾರವಾಗಿ, ಆರೋಪಿಯಾದ ನೀವು ಸಾಕ್ಷಿ 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ಭಾರತೀಯ ನ್ಯಾಯ ಸಂಹಿತೆ ಕಲಂ 352 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**Sd/-**

ದಿನಾಂಕ**:**17.04.2026. **ಸಿವಿಲ್ ನ್ಯಾಯಾಧೀಶರು ಮತ್ತು**

ಸ್ಥಳ**:** ಪೊನ್ನಂಪೇಟೆ. **ಪ್ರಧಾನ್ಯಾದಂ,ಪೊನ್ನಂಪೇಟೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.22/2026**

| | | |
|---|---|---|
| **ಪಿರ್ಯಾದಿ** | : | ಕರ್ನಾಟಕ ಸರ್ಕಾರ,<br>ಪೊನ್ನಂಪೇಟೆ ಪೋಲೀಸ್, |
| | | **ವಿರುಧ್ದ** |
| **ಆರೋಪಿ** | : | ಶ್ರೀ ಪಣಿಎರವರ ಎಮ್.ಮಹೇಶ್, |

**ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ 263 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ನನ್ನಿಂದ ದಿ:17.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

Sd/-

**ದಿನಾಂಕಃ 17.04.2026**
**ಸ್ಥಳಃ ಪೊನ್ನಂಪೇಟೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ, ಪೊನ್ನಂಪೇಟೆ**